SC 5/2023
PW.10

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.10**

**ಚಾಸಾ.12**

ಸಾಕ್ಷಿದಾರರ ಹೆಸರು - ಸಂದೀಪ್

ತಂದೆಯ ಹೆಸರು - ಶೇಖರ ಮರಕಾಲ

ವಯಸ್ಸು - 34 ವರ್ಷ

ಉದ್ಯೋಗ - ಖಾಸಗಿ

ವಿಳಾಸ - ಕುಕ್ಕೆಹಳ್ಳಿ

ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ನಾನು ಬೆಂಗಳೂರಿನಲ್ಲಿ ನನ್ನ ಅಣ್ಣನೊಂದಿಗೆ ಹೋಟೆಲ್ ಉದ್ಯೋಗ ಮಾಡಿ ಕೊಂಡಿದ್ದೇನೆ. ನನ್ನ ಮೂಲ ಮನೆ ಕುಕ್ಕೆಹಳ್ಳಿಯಲ್ಲಿ ಇರುತ್ತದೆ. ನಾನು ಯಾವಾಗಲೂ ಊರಿಗೆ ಬಂದು ಹೋಗುತ್ತಿರುತ್ತೇನೆ. ಮೃತ ಕೃತಿಕ್ ಈತನ ಪರಿಚಯ ಇದೆ, ಆರೋಪಿಯ ಪರಿಚಯ ಇದೆ. ಕೃತಿಕ್ ಈತನಿಗೆ ಆರೋಪಿಯ ಒಡನಾಟ ಇತ್ತು. ಆರೋಪಿ ಬ್ರಹ್ಮಾವರದಲ್ಲಿ ಒಂದು ಮೀನು ಹೋಟೆಲ್ ಇಟ್ಟುಕೊಂಡು ನಡೆಸುತ್ತಿದ್ದ. ಮೃತ ಕೃತಿಕ್ ಈತನ ತಂದೆ ನಮ್ಮ ದೂರದ ಸಂಬಂಧಿ.

2. ಸಪ್ಟೆಂಬರ್ 2022 ನೇ ಸಾಲಿನಲ್ಲಿ ಒಮ್ಮೆ ನಾನು ಊರಿಗೆ ಬಂದಿದ್ದೆ. ನಾನು ಮನೆಯ ಬಳಿ ಇದ್ದೆ. ಸಂಜೆ ಸುಮಾರು 6 ಗಂಟೆಗೆ ಕೃತಿಕ್ ಮನೆಯ ಬಳಿ ಬಂದಿರುತ್ತಾನೆ. ಮೃತ ಕೃತಿಕ್ ನನ್ನ ಬಳಿ ಬಂದು ಸಂಜೆ ಒಟ್ಟಿಗೆ ಒಂದು ಸಣ್ಣ ಪಾರ್ಟಿ ಮಾಡುವಾ ಎಂದು ತಿಳಿಸಿದೆ.

ಅದರಂತೆ ನಾನು, ಹೇಮಂತ್ ಮತ್ತು ಕೃತಿಕ್ ಸ್ವಪ್ನಾ ಬಾರ್ ಗೆ ಹೋದೆವು. ಬಾರ್ ನಲ್ಲಿ ಊಟ ಮಾಡಿ ಮದ್ಯ ಸೇವನೆ ಮಾಡಿ ವಾಪಾಸ್ಸು ಬಂದಿರುತ್ತೇವೆ. ಮರುದಿನ ಬೆಳಿಗ್ಗೆ ನಾನು ಮನೆಯಲ್ಲಿದ್ದಾಗ ಕೃತಿಕ್ ಈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ನಂತರ ವಿಚಾರ ತಿಳಿಯಲಾಗಿ, ಆರೋಪಿ ಸಂಚು ರೂಪಿಸಿ ಆತನನ್ನು ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸಲು ಹೊರಟಿದ್ದಾಗಿ ಪೋಲಿಸರಿಂದ ತಿಳಿದು ಬಂದಿರುತ್ತದೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದಃ</u>**

ನಾನು ಕೆಲಸ ಇದ್ದಾಗ ಮಾತ್ರ ಊರಿಗೆ ಬರುತ್ತಿದ್ದೆ. ಊರಿಗೆ ಬಂದಾಗಲೆಲ್ಲಾ ಕೃತಿಕ್ ಜೊತೆ ಪಾರ್ಟಿ ಮಾಡುತ್ತಿರಲಿಲ್ಲ. ನಾನು ಆತನ ಜೊತೆ ನಿರಂತರವಾಗಿ ಮಾತುಕತೆ ಮಾಡುತ್ತಿರಲಿಲ್ಲ. ಆತನ ದೈನಂದಿನ ಚಟುವಟಿಕೆ ಹಾಗೂ ಬದುಕಿನ ರೀತಿ ನನಗೆ ಗೊತ್ತಿಲ್ಲ. ಆತನಿಗೆ ತುಂಬಾ ಹುಡುಗಿಯರ ಕಾಂಟ್ಯಾಕ್ಟ್ ಇತ್ತು ಎಂದು ಗೊತ್ತಿತ್ತು. ಕೃತಿಕ್ ಆತ್ಮಹತ್ಯೆ ಮಾಡಿಕೊಂಡ ವಿಚಾರ ಅಲ್ಲಿರುವವರು ಹೇಳಿ ಗೊತ್ತಾಗಿರುತ್ತದೆ. ಪೋಲಿಸರು ಹೇಳಿದ ವಿಚಾರ ಬಿಟ್ಟು ನನಗೆ ವೈಯಕ್ತಿಕವಾಗಿ ಬೇರೆ ಯಾವುದೇ ವಿಚಾರ ಗೊತ್ತಿಲ್ಲ. ಕೃತಿಕ್ ಸಂಬಂಧಿಕನಾದ ಕಾರಣ ಪೋಲಿಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> -ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ